ಸಿ.ಸಿ. ನಂ. : 116/2021

ಪಿ.ಡಬ್ಲ್ಯೂ: 3 ಸಿ.ಡಬ್ಲ್ಯೂ: 5

## ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಕಾರವಾರ

**ಸಿ.ಸಿ.ನಂ. : 116/2021**

| | | |
|---|---|---|
| ಸಾಕ್ಷಿದಾರರ ಹೆಸರು | : | ವಿನಾಯಕ |
| ತಂದೆಯ ಹೆಸರು | : | ಲಕ್ಷ್ಮಣ ಹರಿಕಂತ್ರ |
| ವಯಸ್ಸು | : | 41 ವರ್ಷ |
| ಉದ್ಯೋಗ | : | ಮೀನುಗಾರಿಕೆ |
| ವಾಸ್ತವ್ಯ | : | ಬೈತಕೋಲ್, ಕಾರವಾರ |

ಸತ್ಯ ಪ್ರತಿಜ್ಞೆಯ ಮೇರೆಗೆಃ ದಿಃ **27-07-2022**

**ಕಲಂ. 299 ರಡಿಯಲ್ಲಿ ಮುಖ್ಯ ವಿಚಾರಣೆಃ ಮಾನ್ಯ ಹಿರಿಯ ಸ ಸ ಅ ರವರಿಂದಃ**

ನನಗೆ ಚಾಸಾ.8 ರವರ ಪರಿಚಯ ಇಲ್ಲ. ಸುಮಾರು 2-3 ವರ್ಷಗಳ ಹಿಂದೆ ಪೊಲೀಸರು ನನಗೆ ಗೋವಾಕ್ಕೆ ಕರೆದುಕೊಂಡು ಹೋಗಿದ್ದು, ಅಲ್ಲಿ ಬಂಗಾರವನ್ನು ವಶಪಡಿಸಿಕೊಂಡು ಪಂಚನಾಮೆ ಮಾಡಿದ್ದರು. ದಾಖಲೆ ಜೆರಾಕ್ಸ ಪ್ರತಿಯಾಗಿದ್ದರಿಂದ ನಿಷಾನೆಯಾಗಿ ಗುರುತಿಸಿಲ್ಲ. ಅದರಲ್ಲಿ ಏನೆಲ್ಲ ಬಂಗಾರ ವಶಪಡಿಸಿಕೊಂಡರು ಹೇಳಲು ಆಗುವುದಿಲ್ಲ. ಬಂಗಾರದ ಫೋಟೋ ತೋರಿಸಿದರೆ ಗುರುತಿಸಲು ಆಗುವುದಿಲ್ಲ. ಪೋಲೀಸರಿಗೆ ಸ್ಥಳವನ್ನು ಯಾರು ತೋರಿಸಿದ್ದರು ನನಗೆ ಗೊತ್ತಿಲ್ಲ.

**(ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಮಾನ್ಯ ಹಿರಿಯ ಸ ಸ ಅ ರವರು ಪಾಟೀ ಸವಾಲನ್ನು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)**

ಸಿ.ಸಿ. ನಂ. : 116/2021

ಪಿ.ಡಬ್ಲ್ಯೂ: 3 ಸಿ.ಡಬ್ಲ್ಯೂ: 5

**ಪಾಟಿ ಸವಾಲುಃ ಮಾನ್ಯ ಹಿರಿಯ ಸ ಸ ಅ ರವರಿಂದಃ**

ದಿಃ 25-01-2017 ರಂದು ಪೊಲೀಸರ ವಶದಲ್ಲಿದ್ದ 2 ನೇ ಆರೋಪಿ ವಿರಾಜ ಇತನು ತಾನು ಮತ್ತು ಇತರರು ಗೋವಾದಲ್ಲಿ ಕಳ್ಳತನ ಮಾಡಿದ ಬಂಗಾರದ ಒಡವೆಗಳನ್ನು ಗೋವಾದ ಪೊಂಡಾ ಊರಿನ ದೀಲಿಪ ಎನ್ನುವವರಿಗೆ ಮಾರಾಟ ಮಾಡಿದ್ದು, ನನ್ನೊಂದಿಗೆ ಬಂದರೆ ತೋರಿಸುತ್ತೇನೆ ಎಂದು ಹೇಳಿದ್ದು ಅದರಂತೆ ಪೊಲೀಸರು ನನ್ನನ್ನು ಕರೆದುಕೊಂಡು ಹೋಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಅಲ್ಲಿ ಮನೆಯಲ್ಲಿ ರಾಮಚಂದ್ರ ಪವಾರ ಎನ್ನುವ ವ್ಯಕ್ತಿ ಇದ್ದು ಆತನು 2 ನೇ ಆರೋಪಿಯನ್ನು ಗುರುತಿಸಿದ್ದು, 2 ನೇ ಆರೋಪಿ ಕೊಟ್ಟ ಬಂಗಾರದ ಒಡವೆಗಳಾದ ಬಂಗಾರದ ನಮೂನೆಯ ಲಕ್ಷ್ಮಿ ಚಿತ್ರ ಇರುವ ಸಣ್ಣ ಲಾಕೇಟ್, ಚಿನ್ನದ ತಂತಿ ಹಾಗೂ ಸಣ್ಣ ದೊಡ್ಡ ಸೈಜಿನ ಮಣಿಗಳಿರುವ ಪ್ಲಾಸ್ಟೀಕ್ ಪ್ಯಾಕೇಟ್ ಒಂದು, ಬಂಗಾರದ ನಮೂನೆಯ ಸಣ್ಣ ಗಟ್ಟಿ ಒಂದು ಹಾಗೂ ಇತರೇ ಬಂಗಾರದ ಒಡವೆಗಳು ತುಂಡು ಇರುವ ಪ್ಲಾಸ್ಟೀಕ್ ಪ್ಯಾಕೇಟ್ ಒಂದು, ಬಂಗಾರದ ನಮೂನೆಯ ಸಣ್ಣ ಮಣಿಗಳು ಹಾಗೂ ಸಣ್ಣ ತಂತಿಗಳಿರುವ ಪ್ಲಾಸ್ಟೀಕ್ ಪ್ಯಾಕೇಟ್ ನ್ನು ಹಾಜರುಪಡಿಸಿದ್ದರು ಎಂದರೆ ಸರಿಯಲ್ಲ. ಅದೇ ದಿನ ಬಂಗಾರದ ನಮೂನಪಿ ಲಕ್ಷ್ಮಿಯ ಚಿತ್ರದ ಸಣ್ಣ ಲಾಕೇಟ್ ಹಾಗೂ ಮಣಿಗಳು, ಸಣ್ಣ ಮಣಿಗಳ ಅರ್ಧ ಭಾಗ ಗಳು ಇರುವ ಪ್ಲಾಸ್ಟೀಕ್ ಪ್ಯಾಕೇಟ್, ತೆಂಗಿನ ಮರದ ಚಿತ್ರ ಇರುವ ಬಂಗಾರದ ನಮೂನೆಯ ಗಟಿ ಹಾಗೂ ಸಣ್ಣ ಗಟ್ಟಿ ಇರುವ ಪ್ಲಾಸ್ಟಿಕ್ ಪ್ಯಾಕೇಟ್, ಬಂಗಾರದ ನಮೂನೆಯ ಕಡ್ಡಿ ಇರುವ ಪ್ಲಾಸ್ಟೀಕ್ ಪ್ಯಾಕೇಟ್ ಒಂದು, ಕೊಂಡಿ ನಮೂನೆಯ ಬಂಗಾರದ ನಮೂನೆ ತುಣುಕುಗಳಿರುವ ಪ್ಲಾಸ್ಟೀಕ್ ಪ್ಯಾಕೇಟ್ ಒಂದು, ಬಂಗಾರದ ನಮೂನೆಯ ತಂತಿ ಹಾಗೂ ತುಂಡುಗಳಿರುವ ಪ್ಲಾಸ್ಟಿಕ್ ಪ್ಯಾಕೇಟ್ ಒಂದು, ಕರಿ ಮಣಿ ಹಾಗೂ ಬಂಗಾರದ ನಮೂನೆಯ ಮಣಿ ಪೊಣಿಸಿದ ನಾಲ್ಕು ಎಳೆಯ ತುಂಡಾದ ಸರ ಹಾಗೂ ಸಣ್ಣ ತುಂಡುಗಳು ಮತ್ತು ಬಂಗಾರದ ನಮೂನೆಯ ಮಣಿಗಳು ಹಾಗೂ ಕೊಂಡಿ ನಮೂನೆಯ ಬಂಗಾರದ ನಮೂನೆಯ ತುಣುಕುಗಳಿರುವ ಪ್ಲಾಸ್ಟೀಕ್ ಪ್ಯಾಕೇಟ್ ಒಂದು, ಬಂಗಾರದ ನಮೂನೆಯ ಇಂಗ್ಲಿಷ ಅಕ್ಷರಗಳು ಹಾಗೂ ಅವುಗಳ ತುಂಡುಗಳು ಇರುವ ಪ್ಲಾಸ್ಟೀಕ್ ಪ್ಯಾಕೇಟ್ ಒಂದು, ಬಂಗಾರದ ನಮೂನೆಯ ಸಣ್ಣ ಮಣಿಗಳಿರುವ ಪ್ಲಾಸ್ಟೀಕ್ ಪ್ಯಾಕೇಟ್ ಒಂದು , 2000 ಮುಖ ಬೆಲೆಯ ನೋಟುಗಳು 19, 500 ಮುಖಬೆಲೆಯ 3 ನೋಟುಗಳು, 100 ರೂ. ಮುಖ ಬಲೆಯ ನಾಲ್ಕು ನೋಟುಗಳು ಹೀಗೆ 39,900/- ವಶಪಡಿಸಿಕೊಂಡು ನಿಪಿ.13 ರಂತೆ ಪಂಚನಾಮೆಯನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಿಪಿ.13 ರಂತೆ ಪಂಚನಾಮೆ ಮಾಡಿ

ಸಿ.ಸಿ. ನಂ. : 116/2021
ಪಿ.ಡಬ್ಲ್ಯೂ: 3 ಸಿ.ಡಬ್ಲ್ಯೂ: 5

ಬಂಗಾರದ ಒಡವೆಗಳನ್ನು ವಶಪಡಿಸಿಕೊಂಡಿದ್ದರೂ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ
Sd/-
ಮುಖ್ಯ ನಾಯಿಕ ದಂಡಾಧಿಕಾರಿಗಳು,
ಕಾರವಾರ